International Journal of Kannada Research
www.kannadajournal.com

**ISSN: 2454–5813**
IJSR 2017; 3(2): 84-86
© 2017 IJKS
www.kannadajournal.com
Received: 17-02-2017
Accepted: 18-03-2017

**ಕಲ್ಪನ ಪಿ.**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಬೀರೂರು

**Correspondence**
**ಕಲ್ಪನ ಪಿ.**
ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು, ಬೀರೂರು

# ಸ್ತ್ರೀವಾದಿ ಹಿನ್ನೆಲೆಯಲ್ಲಿ ಸಿದ್ಧರಾಮನ ವಚನಗಳು

**ಕಲ್ಪನ ಪಿ.**

ಜಗತ್ತಿನ ಸಾಹಿತ್ಯದಲ್ಲಿಯೇ ಬಹಳ ಅಪರೂಪ ಎನ್ನಬಹುದಾದ ವಚನ ಸಾಹಿತ್ಯ ಸಮಾನತೆಯ ತಳಹದಿಯ ಮೇಲೆ ಸಮಾಜ ನಿರ್ಮಿತವಾಗಬೇಕಾದ ಪರಿಸ್ಥಿತಿಯಲ್ಲಿ ಜನಪರ ದನಿಯಾಗಿ ಮೂಡಿಬಂದಿತು. ಅನುಭಾವ ಗದ್ಯವಾದ ವಚನ ಸಾಹಿತ್ಯದಲ್ಲಿ ಶಿವಶರಣರು ಅಂತರಂಗದ ಆಳವಾದ ಅನುಭವಕ್ಕೆ ಕನ್ನಡಿ ಹಿಡಿದಿದ್ದಾರೆ , ಆತ್ಮನಿರೀಕ್ಷಣೆಯನ್ನು ಮಾಡಿದ್ದಾರೆ . ವಚನ ಸಾಹಿತ್ಯ ಹಲವಾರು ಮೌಲ್ಯಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡಿದೆ . "ವಿಪ್ರ ಮೊದಲಾಗಿ ಅಂತ್ಯಜ ಕಡೆಯಾಗಿ " ಸರ್ವರೂ ಸಮಾನರು ಎಂಬುದನ್ನು ಸಾರಿದ್ದಲ್ಲದೆ ಆಚರಣೆಗೆ ತಂದವರು ಶಿವಶರಣರು. ಸಾಮಾಜಿಕ ,ಧಾರ್ಮಿಕ ,ಆಧ್ಯಾತ್ಮ ಸ್ತರದಲ್ಲಿ ಸಮಾನತೆ ಮೂಡಿದ ಕಾಲ . ಪುರುಷರಷ್ಟೇ ಸ್ಥಾನಮಾನವನ್ನು ಸ್ತ್ರೀಯರಿಗೂ ನೀಡಿ ಅವಳು ಸಹಧರ್ಮಿಣಿಮಾತ್ರವಲ್ಲದೆ ವಿಚಾರ ಪತ್ನಿಯೂ ಆಗಬಲ್ಲಳು ಎಂಬುದನ್ನು ನಿರೂಪಿಸಿದ ಕಾಲ.

ನಮ್ಮ ಸಾಮಾಜಿಕ ಪರಿಸ್ಥಿತಿ ಅನಾದಿಕಾಲದಿಂದಲೂ ಸ್ತ್ರೀಯನ್ನು ಒಂದು ಪೂರ್ವನಿರ್ಧಾರಿತ ಪ್ರಕಾರದಲ್ಲಿ ನಿಯಂತ್ರಿಸಿದೆ. ಮಾನವಜಾತಿಯೆಂದರೆ ಪುರುಷ, ಸ್ತ್ರೀಯನ್ನು ಪುರುಷನಲ್ಲದವಳು ಎಂದೇ ವ್ಯಾಖ್ಯಾನಿಸಿ ಅವಳನ್ನು ಸ್ವತಂತ್ರ ಅಸ್ತಿತ್ವಯಿಲ್ಲದವಳಂತೆ ಮಾಡಿದ್ದಾರೆ . ತಾಯಿ,ಪತ್ನಿ,ವೇಶ್ಯೆ ಇತ್ಯಾದಿ ಪಡಿಯಚ್ಚುಗಳಲ್ಲೇ ಸ್ತ್ರೀಯನ್ನು ನೋಡಿದ್ದಾರೆ. ಆದರೆ ೧೨ನೇ ಶತಮಾನ ಸ್ತ್ರೀವಾದವೆಂಬ ವೈಚಾರಿಕ ಚೌಕಟ್ಟನ್ನು ನಿರ್ಮಿಸಿದೆ. ವಚನಕಾರರು ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲೂ ಹೆಜ್ಜೆಯಿಡಲು ಅನುವು ಮಾಡಿಕೊಟ್ಟರು.

ಜ್ಞಾನಯೋಗಿ ಸಿದ್ಧರಾಮೇಶ್ವರನು ಬಸವಾದಿಪ್ರಮಥರ ಸಮಕಾಲೀನ ಶರಣ. ಸಿದ್ಧರಾಮನು ವಚನಕಾರನೂ ಹೌದು, ಕವಿಯೂ ಹೌದು . ಕನ್ನಡನಾಡಿನ ಧಾರ್ಮಿಕಚರಿತ್ರೆಯಲ್ಲಿ ಉಜ್ವಲ ಹೆಸರನ್ನು ಪಡೆದ ಸಿದ್ಧರಾಮ ಕಾಯಕವೇ ಮುಖ್ಯವೆಂದು ಸಾರಿದ ಕರ್ಮಯೋಗಿ. ಆರಂಭದ ಚಿಂತನೆಗಳಲ್ಲಿ ಸ್ತ್ರೀಯನ್ನು ಸಾಂಪ್ರದಾಯಿಕ ದೃಷ್ಟಿಕೋನದಲ್ಲಿ ನೋಡುವಸಿದ್ಧರಾಮನು ತನ್ನ ಮಾನಸಿಕ ಅಳುಕನ್ನು ಸ್ತ್ರೀಗೆ ಆರೋಪಿಸಿ ಹೀಗೆ ಹೇಳುತ್ತಾನೆ.

ಆಸೆಯೆಂಬುವಳು ಆರನಾದಡೆಯೂ ತನ್ನತ್ತಲೆಳೆವಳು
ನೋಡಾ ಈ ಆಸೆಯೆಂಬುವಳು ಅವರಿವರೆನ್ನದೆ
ಆರನಾದಡೆಯೂ ಕೊಲಲಿಕೆ ಬಗೆವಳು- - - -- - - - -

ಶಿವಯೋಗಿಯಾಗಲು ಅಖಂಡ ಬ್ರಹ್ಮಚರ್ಯದಿಂದ ಮಾತ್ರ ಸಾಧ್ಯ ಎಂದುಕೊಂಡಿದ್ದ ಮನ ಸ್ಸು ಸಿದ್ಧರಾಮನದು.

ನಾರಿಯರುರದ ಗಾಳಿ ಸೋಕದಂತೆ ಎನ್ನುವ
ಮಂತ್ರಿಸಿ ರಕ್ಷಿಸಯ್ಯ ಎನಗಿನಿಸು ಮಾಡಿ ಬದುಕಿಸಿಯ್ಯ
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನ.

ಆನಂತರದಲ್ಲಿ ಮನಸ್ಸು ಮಾಗಿ ಪರಿಪಕ್ವವಾಗುತ್ತಾ ಹೋದಹಾಗೆ ಸ್ತ್ರೀಯರ ಪಾವಿತ್ರ್ಯಕ್ಕೆ ಭಂಗ ತರಬಾರದು, ಹೆಣ್ಣನ್ನು ಅನ್ಯಭಾವದಿಂದ ನೋಡಬಾರದು ಎಂದಿದ್ದಾನೆ. ಸಿದ್ಧರಾಮನು ತನ್ನ ಒಂದು ವಚನದಲ್ಲಿ ಹೆಣ್ಣನ್ನು ನಿರ್ಜೀವವಸ್ತುವಿನಂತೆ ಇಟ್ಟುನೋಡಿರುವುದನ್ನು ಗಮನಿಸಬಹುದು. ಇಲ್ಲಿ ಹೆಣ್ಣು, ಹೊನ್ನುಮತ್ತು ಮಣ್ಣಿನಂತೆ ವಸ್ತುವಾಗಿದ್ದಾಳೆ, ಒಡವೆಯಾಗಿದ್ದಾಳೆ. ತಾನು ಭಕ್ತನಾಗಿ ಹೊನ್ನು, ಹೆಣ್ಣು, ಮಣ್ಣು ಈ ಮೂರು ಶಿವನ ಒಡವೆ ಎಂದು ಹೆಣ್ಣಿಗೆ ನಿರ್ಜೀವಸ್ಥಾನ ಕೊಡುತ್ತಾನೆ. ಹೆಣ್ಣನ್ನು ಭವಕ್ಕೆ ಬೀಜ ಎಂಬ ಸಾಂಪ್ರದಾಯಿಕ ದೃಷ್ಟಿ ವ್ಯಕ್ತಪಡಿಸಿದ ಸಿದ್ಧರಾಮ ಅದರಿಂದ ಬಿಡಿಸಿಕೊಂಡ ಬಗೆ ಅನನ್ಯವಾಗಿದೆ. ಹೆಣ್ಣಿನ ಜೊತೆ ಶರಣನೊಬ್ಬ ಇಟ್ಟುಕೊಳ್ಳಬೇಕಾದ ಸೂಕ್ಷ್ಮ ಸಂಬಂಧದ ಅರಿವು ಅವನ ವಚನಗಳಲ್ಲಿದೆ.

ಹೆಣ್ಣ ಹಿಡಿದು ಹೆಣ್ಣ ಭೋಗಿಸಬಾರದು
ಮಣ್ಣ ಹಿಡಿದು ಮಣ್ಣ ಭೋಗಿಸಬಾರದು. . . . . . . .

ಹೆಣ್ಣು ಮಣ್ಣು ಮತ್ತು ಹೊನ್ನು ಇವುಗಳ ಜೊತೆ ಇದ್ದು ಅವುಗಳಿಗೆ ಅಂಟಿಕೊಳ್ಳದೆ ಬದುಕುವವನೇ ನಿಜವಾದ ಭಕ್ತ ಎಂಬುದು ಸಿದ್ಧರಾಮನ ನಿಲುವಾಗಿದೆ.

ಸಿದ್ಧರಾಮನು ಹೆಣ್ಣಿನ ಸ್ಥಾನವನ್ನು ಎಷ್ಟು ಉನ್ನತಿಗೇರಿಸಲು ಸಾಧ್ಯವೋ ಅಷ್ಟೂ ಉನ್ನತಿಗೇರಿಸಿ ಆಕೆಗೆ ಆತ್ಮಸ್ಥೈರ್ಯ ತುಂಬುವ ಪ್ರಯತ್ನ ಮಾಡುತ್ತಾನೆ.

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲ ಸಿಧ್ಧಮಲ್ಲಿನಾಥ ನೋಡಾ.

ಗಂಗೆ, ಗೌರಿ ,ಸರಸ್ವತಿ ಲಕ್ಷ್ಮಿ ಎಂಬ ಪುರಾಣದ ಪಾತ್ರಗಳ ಕಲ್ಪನೆ ಈ ವಚನಕ್ಕೆ ಶಕ್ತಿ ತುಂಬುತ್ತದೆ . ಕೊನೆಯಲ್ಲಿ ಸೂಚಿಸುವ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ , ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂಬ ಸಾಲು ಅರಿವಿನ ಸಂಕೇತವಾಗಿ ಬಂದಿದೆ. ಸ್ತ್ರೀ ಭಕ್ತನ ಮನಕ್ಕೆ ಸಂಕೋಲೆಯಲ್ಲ ಎಂಬ ಅಂಶವು ವ್ಯಕ್ತವಾಗುವುದು . ಹೊಸ ಆತ್ಮಶ್ರದ್ಧೆಯ ಬೆಳಕನ್ನು ಸ್ತ್ರೀಯರಲ್ಲಿ ಕಾಣಿಸಿದ ಯುಗ ೧೨ನೇ ಶತಮಾನ ಲಿಂಗವನ್ನು ಪತಿಸ್ಥಾನದಲ್ಲಿರಿಸಿ ತಾವು ಸತಿ ಸ್ಥಾನದಲ್ಲಿ ನಿಂತ ಶರಣರು ಹೆಣ್ಣನ್ನು ಕೀಳಾಗಿ ಕಾಣಲು ಶಕ್ಯ ವಿರಲಿಲ್ಲ. ಈ ಸಂದರ್ಭದಲ್ಲಿಯೇ ವಚನಕಾರರು ಇಟ್ಟುಕೊಂಡ ಆದರ್ಶ ಶರಣ ಸತಿ ಲಿಂಗ ಪತಿ. ಇದೇ ವೈಚಾರಿಕತೆಯಲ್ಲಿ ಶರಣ ಸತಿ ಲಿಂಗ ಪತಿ ಭಾವದ ವಚನಗಳನ್ನು ಹೆಚ್ಚು ಬರೆದವನು ಸಿದ್ಧರಾಮ . ಕಪಿಲ ಸಿದ್ಧ ಮಲ್ಲಿಕಾರ್ಜುನನ ಸತಿಯಾಗಿ ನಿವೇದನೆ ಸಲ್ಲಿಸುತ್ತಾನೆ.

ನಲ್ಲನ ಆಗಮನಕ್ಕಾಗಿ ಕಾತರಿಸಿ ಸಂಭ್ರಮಿಸುವ ಹೆಣ್ಣಿನ ಚಿತ್ರವನ್ನು ಈ ವಚನದಲ್ಲಿ ಕೊಡುವನು.

ನೆನಹಿನ ನಲ್ಲನು ಮನೆಗೆ ಬಂದಡೆ ಮನದಲ್ಲಿ ಗುಡಿಗಟ್ಟುವೆನವ್ವಾ
ತೋರಣ ತೋರಣ ಮಾಮರ ಮಾಮರ ತೋರಣಗಟ್ಟುವೆನವ್ವಾ
ಕಾಮ ಸಂಗವಳಿದು ನಿಷ್ಕಾಮ ಸಂಗಕ್ಕೆಳೆಸುವೆನವ್ವಾ
ಕಪಿಲಸಿದ್ಧಮಲ್ಲಿಕಾರ್ಜುನನ ಕೂಡುವೆನವ್ವಾ

ನಲ್ಲನ ಆಗಮನ ನೊಂದ ಮನಕ್ಕೆ ಚೈತನ್ಯದಾಯಕವಾಗಿದೆ ಜೊತೆಗೆ ನಲ್ಲೆಯ ಅದಮ್ಯ ಉತ್ಸಾಹವೂ ಪುಟಿಯುತ್ತಿದೆ. ನಲ್ಲನನ್ನು ಸಂಭ್ರಮ ಸಡಗರಗಳಿಂದ ಇದಿರುಗೊಳ್ಳಲು ತೋರಣ ಕಟ್ಟುತ್ತಾಳೆ. ಮನದಲ್ಲೇ ಗುಡಿಗಟ್ಟಿ ನಲ್ಲನನ್ನು ಸೇರುವ ತೀವ್ರ ಹಂಬಲವನ್ನು ವ್ಯಕ್ತಪಡಿಸುತ್ತಾಳೆ,

ಬಾರದೆ ಗಂಡ ಬಡವಾದೆ
ಉಣ್ಣದೆ ಗಂಡ ಉಪವಾಸವಿದ್ದೆ
ನನ್ನ ಕಣ್ಣನೀರು ನಿನಗೆ ತಾಗಲೋ
ಕಪಿಲಸಿದ್ಧಮಲ್ಲಿನಾಥ.

ಗಂಡನ ನಿರೀಕ್ಷೆಯಲ್ಲಿ ಅನ್ನಾಹಾರ ತ್ಯಜಿಸಿ ಬಡವಾದ ಹೆಣ್ಣಿನ ಮನದಾಳದ ನೋವನ್ನು ಈ ವಚನದಲ್ಲಿ ನೋಡಬಹುದು.

ಎಷ್ಟೇ ಬೇಡಿದರೂ ಮನಕರಗದ ಪರಮಾತ್ಮನ ನಿಷ್ಕರುಣೆಯನ್ನು ಆಕ್ಷೇಪಿಸುತ್ತಾ ತವರಿಗೆ ಹೋಗಬೇಕೆನ್ನುತ್ತಾನೆ ಸಿದ್ಧರಾಮ.

ಗಂಡ ಬಾರೆನೆನ್ನ ತವರೂರಿಗೆ ಹೋಗುವೆನೆನಲು
ನೋಡೆನೋಡೆಲಗವ್ವಾ
ಬೇಟೆಯನಾಡುವ ನಾಯತಲೆಯ ಕೊಯ್ದಿಟ್ಟು
ತಾ ಬೇರೆ ಬೇಟೆಕಾರನಾದ
ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನ ನೆಲೆಯಲ್ಲಿ ನಿಲವ ಕಂಡನು.
ಹುಚ್ಚನ ಸಂಗ ನಿಶ್ಚಯವಾಯಿತ್ತು.

ತನ್ನ ನಲ್ಲನ ವೈಶಿಷ್ಟ್ಯತೆಯನ್ನು ತನ್ನ ಆತ್ಮೀಯ ಸ್ನೇಹಿತೆಗೆ ಹೇಳಿಕೊಳ್ಳುವ ರೀತಿಯಲ್ಲಿ ಈ ವಚನವಿದೆ. ಇಲ್ಲಿ ನಲ್ಲನ ಕಟುಕುತನ ಮತ್ತು ದುಡುಕುಗಳು ವ್ಯಕ್ತವಾಗುವುದರ ಜೊತೆಗೆ ಕೊನೆಯ ಸಾಲು ವಿವೇಚನಾ ಶಕ್ತಿಯನ್ನು ಕಳೆದುಕೊಂಡ ನಲ್ಲನ ಸಂಗ ನನ್ನದೆನ್ನುತ್ತಾನೆ.

‘“ ಎಲ್ಲರ ಪರಿಯಲ್ಲ ಅವನ ಪರಿ ಹೊಸತು ಕಾಲಾರರಲ್ಲಿ ನಡೆವ,ಕಿವಿಯಲ್ಲಿ ಉಂಬ,ಮೂಗಿನಲ್ಲಿ ನೋಡುವ ಬಾಯಲ್ಲಿ ಭಾವಿಸುವ ಕಣ್ಣಿನಲ್ಲಿ ಮೂರ್ಛೆಹೋದ ’’ಎಂದು ತನ್ನ ಮನೆಯೊಡೆಯನ ಸ್ವಭಾವ ವೈಚಿತ್ರ್ಯಗಳನ್ನು ಹೇಳುವನು. ಪತಿ ಪತ್ನಿಯರ ಒಲವನ್ನು ಸಿದ್ಧರಾಮ ಒಂದು ಆದರ್ಶ ದಾಂಪತ್ಯವೊಂದರ ಮೂಲಕ ತಿಳಿಸುವನು.

ಭೋಗವನ್ನು ಯೋಗದ ಮಟ್ಟಕ್ಕೇರಿಸಿದ ಸಿದ್ಧರಾಮ ಹೆಣ್ಣನ್ನು ದಾಂಪತ್ಯ ಜೀವನದಲ್ಲಿ ತುಚ್ಚವೆಂದು ತಿಳಿದವನಲ್ಲ. ಹೆಣ್ಣನ್ನು ಮಾಯೆಯಿಂದ ಬಿಡಿಸಿ ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧಮಲ್ಲಿಕಾರ್ಜುನನೆಂದು ಹೆಣ್ಣಿಗೆ ದೇವತೆಯ ಸ್ಥಾನವನ್ನು ನೀಡಿ ಗೌರವಿಸುತ್ತಾನೆ. ತನ್ನ ಅನುಭಾವದ ನಿವೇದನೆಗೆ ಶರಣ ಸತಿ ಲಿಂಗ ಪತಿ ಭಾವವನ್ನು ಮಾಧ್ಯಮವನ್ನಾಗಿ ಬಳಸಿ ತಾನು ಸತಿಯೆಂದು ಒಪ್ಪಿಕೊಳ್ಳುವ ಮುಖಾಂತರ ಸ್ತ್ರೀತ್ವಕ್ಕೆ ಒಂದು ಹೊಸ ಅರ್ಥ ನೀಡಿದ್ದಾನೆ. ಕೆಲವೊಮ್ಮೆ ಶಿವಯೋಗಿಯಾಗಬೇಕೆಂದರೆ ಅಖಂಡ ಬ್ರಹ್ಮಚಾರಿಯಾಗಿರಬೇಕು ಎಂಬ ಭಾವನೆಯನ್ನು ಕಳಚಿ ಎಚ್ಚೆತ್ತ ಅರಿವಿನಿಂದ ತನ್ನ ದೌರ್ಬಲ್ಯವನ್ನು ನಿವೇದಿಸಿಕೊಳ್ಳುತ್ತಾನೆ.

ಯೋಗಿಗೆ ಕೋಪವೇ ಮಾಯೆ
ರೋಗಿಗೆ ಅಪಥ್ಯವೇ ಮಾಯೆ
ಜ್ಞಾನಿಗೆ ಮಿಥ್ಯವೇ ಮಾಯೆ
ಅರಿದೆನೆಂಬವಂಗೆ ನಾನು ನೀನೆಂಬುದೇ ಮಾಯೆ.

ಎಂದು ಕೋಪ ಅಪಥ್ಯ ಮಿಥ್ಯವನ್ನೆಲ್ಲಾ ಮಾಯೆಯ ಸ್ಥಾನದಲ್ಲಿ ನಿಲ್ಲಿಸಿದನು. ಇದರಿಂದ ಹೆಣ್ಣನ್ನು ಮಾತ್ರ ಮಾಯೆ ಎನ್ನುತ್ತಾ ಬಂದ ಸಾಂಪ್ರದಾಯಿಕ ಹೇಳಿಕೆಗಳು ಹುಸಿ ಎಂಬುದು ಅರಿವಿಗೆ ಬಂದಿತು. ಹೆಣ್ಣಿನ ಗಾಳಿ ಸೋಕಬಾರದೆಂದಿದ್ದ ಸಿದ್ಧರಾಮನ ಸ್ತ್ರೀತ್ವದ ಚಿಂತನೆಗಳು ಆನಂತರದಲ್ಲಿ ವಿಕಾಸವಾಗುತ್ತಾ ಹೋಗುತ್ತದೆ .

ಸ್ತ್ರೀಯರ ಪಾವಿತ್ರ್ಯಕ್ಕೆ ಭಂಗ ತರಬಾರದು,ಅನ್ಯಭಾವದಿಂದ ನೋಡಬಾರದು,ಅನ್ಯ ಸ್ತ್ರೀಯರನ್ನು ಹೆತ್ತ ತಾಯಿಯಂತೆ ಕಾಣಬೇಕು. ಪರಸ್ತ್ರೀ,ಪರದ್ರವ್ಯ,ಮುಟ್ಟದಂತಿರುವುದು. ನೋಡುವ ದೃಷ್ಟಿ ತನ್ನ ಸ್ತ್ರೀಯಳಿಗೆ ಮಾತ್ರ ಮೀಸಲಾಗಿರಬೇಕು ಎಂದು ಎಚ್ಚರಿಸುವ ಸಿದ್ಧರಾಮನ ಈ ಮಾತುಗಳಲ್ಲೆಲ್ಲಾ ಸ್ತ್ರೀ ಗೌರವ ಎದ್ದು ಕಾಣುತ್ತದೆ. ಸಿದ್ಧಪುರುಷ ಸಿದ್ಧರಾಮನ ಹೆಣ್ಣುಮಕ್ಕಳ ಮೇಲಿನ ಅಭಿಮಾನ ಮೆಚ್ಚುವಂಥದ್ದು. ಹೆಣ್ಣು ಮುಕ್ಯಾಂಗನೆ.ದೇವನಿಲ್ಲದ ಮನೆಯನ್ನು ದೇವಿಯೂ ಸೈರಿಸಳು. ಇಬ್ಬರೂ ಇದ್ದಾಗಲೇ ಸಂಭ್ರಮ, “ಪಾರ್ವತಿ ಪ್ರಿಯ ಮಹದೇವ”,ಎಂದು ಹೆಣ್ಣಿಗೆ ದೇವತೆಯ ಸ್ಥಾನ ನೀಡಿ ಗೌರವಿಸಿದ್ದಾನೆ. ಹೀಗೆ ಸಿದ್ಧರಾಮನ ವಚನಗಳಲ್ಲಿ ಮಹಿಳಾಪರವಾದ ದನಿಯನ್ನು ನೋಡಬಹುದು.

ಆಕರ ಗ್ರಂಥಗಳು

:ವಚನಾನುಶೀಲನ - ಡಾ॥ ಎಸ್.ವಿದ್ಯಾಶಂಕರ
ತನುಕರಗದವರಲ್ಲಿ -ಡಾ॥ಮಲ್ಲಿಕಾ ಘಂಟಿ
ಸಿದ್ಧರಾಮ ಸಂಪದ -ಡಾ॥ಬಸವರಾಜ ನೆಲ್ಲಿಸರ
ಸಿದ್ಧಸಿರಿಪುಷ್ಪಗಿರಿ - ಸ್ಮರಣ ಸಂಚಿಕೆ